ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಬುಧವಾರ, ದಿನಾಂಕ: 09ನೇ ಡಿಸೆಂಬರ್, 2020

ಬಹು ಮಹಡಿ ಕಟ್ಟಡಗಳಿಗೆ ವಸತಿ ಯೋಗ್ಯ ಪ್ರಮಾಣ ಪತ್ರ ಕುರಿತು.

ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-

261 (206) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಹು ಮಹಡಿ ಕಟ್ಟಡಗಳಿಗೆ ವಸತಿ ಯೋಗ್ಯ ಪ್ರಮಾಣ ಪತ್ರ ನೀಡುವ ಸಮಯದಲ್ಲಿ ಸದರಿ ಕಟ್ಟಡಗಳಲ್ಲಿರುವ ಸೌಲಭ್ಯಗಳಾದ, ಜಿಮ್ನಾಶಿಯಂ ಕೊಠಡಿ, ಫಂಕ್ಷನ್ ಹಾಲ್, ಕ್ಲಬ್ ಹೌಸ್, ಇನ್ಡೋರ್ ಗೇಮ್ಸ್, ಸ್ವಿಮಿಂಗ್ ಪೂಲ್ ಸೌಲಭ್ಯಗಳಿಗೂ ಬಳಕೆ ಪ್ರಮಾಣಪತ್ರ ನೀಡಲಾಗುತ್ತಿದೆಯೇ;

(ಆ) ಸದರಿ ಸೌಲಭ್ಯಗಳ ಕೊಠಡಿಗಳಿಗೆ ಆಸ್ತಿ ತೆರಿಗೆ ವಿಧಿಸಲಾಗುತ್ತಿದೆಯೇ; ಕಳೆದ 5 ವರ್ಷಗಳಲ್ಲಿ ಈ ಸೌಲಭ್ಯಗಳನ್ನು ನೀಡುವ ವಸತಿ ಸಂಕೀರ್ಣಗಳಲ್ಲಿ ಸಂಗ್ರಹಿಸಲಾದ ಆಸ್ತಿ ತೆರಿಗೆ ಎಷ್ಟು; (ವರ್ಷವಾರು ವಿವರ ನೀಡುವುದು)

(ಇ) ಮೇಲ್ಕಂಡ ಸೌಲಭ್ಯಗಳ ಕುರಿತು ವಾಸ ಯೋಗ್ಯ ಪ್ರಮಾಣ ಪತ್ರದಲ್ಲಿ (oc) ನಮೂದಿಸಲಾಗುತ್ತಿದೆಯೇ; ಈ ಸೌಲಭ್ಯಗಳು ಇರುವ ಶಾಶ್ವತ ನಿರ್ಮಾಣಗಳಿಗೆ ಡೋರ್ ನಂಬರ್ ನೀಡಲಾಗಿದೆಯೇ; ಡೋರ್ ನಂಬರ್ ಇಲ್ಲದೆ ಈ ಸೌಲಭ್ಯಗಳನ್ನು ನೀಡಬಹುದೇ? (ವಿವರ ನೀಡುವುದು)